ರೆಕ್ರೂಟ್‌ಮೆಂಟ್ ಮಾಡುವಾಗ ಬ್ಯಾಕ್‌ವರ್ಡ್ ಕಮ್ಯೂನಿಟೀಸಿಗೆ ಮತ್ತು ನಿಮ್ಮ ಪಂಗಡದವರಿಗೆ ಪ್ರೊಪೋರ್ಷನಲ್ಲಾಗಿ ನೌಕರಿಗಳನ್ನು ರಿಜರ್ವ್ ಮಾಡಬೇಕೆಂದು ಇದ್ದರೂ ಅದನ್ನು ಈಗ ಸರ್ಕಾರದವರು ಕಿತ್ತುಹಾಕಿದ್ದಾರೆ. ಆದರೂ ಆ ರೀತಿ ಇಲ್ಲವೆಂದು ತಾವು ಹೇಳಿದ್ದೀರಿ. ಅದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—1969 ರಲ್ಲಿ ಇದರ ಬಗ್ಗೆ ಇದ್ದಂಥ ರೂಲ್ಸ್‌ನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿದೆ. ಅದರ ಪ್ರಕಾರ ಈಗ ಯಾವ ರೀತಿ ಮಾಡಬೇಕೆಂಬುದನ್ನು ಮತ್ತು 1973 ನೇ ಇಸವಿಯ ಒಂದು ರೂಲನ್ನು ಈಗಾಗಲೇ ಅವರಿಗೆ ಕಳುಹಿಸಿಕೊಟ್ಟಿದ್ದೇವೆ. ಮೊದಲಿದ್ದ ಕಮಿಟಿಗಳಲ್ಲಿ ಡಿಪಾರ್ಟ್‌ಮೆಂಟಿನ ಮುಖ್ಯಾಧಿಕಾರಿಗಳು, ಮತ್ತು ಡೆಪ್ಯುಟಿ ಸೆಕ್ರೆಟರಿಗಳಿಗೆ ಮೇಲ್ಪಟ್ಟ ಅಧಿಕಾರಿಗಳೊಬ್ಬರು ಮತ್ತು ರಿಪ್ರೆಸೆಂಟೆಡ್ ಅಧಿಕಾರಿ ಜಿಲ್ಲಾಧಿಕಾರಿಗಳಿಗೆ ಮೇಲ್ಪಟ್ಟವರು ಒಬ್ಬರು ಇರಬೇಕೆಂದಿತ್ತು. ಈಗ ಅದಕ್ಕೆ ಬದಲು ಮೂರು ಜನರನ್ನು ಖಾಸಗೀಯವರನ್ನೇ ಹಾಕಬೇಕೆಂದು ಮಾಡಿದ್ದೇವೆ. ಅದರ ಪ್ರಕಾರ ಒಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧ ಪಟ್ಟವರೂ ಸಹ ಇರಬೇಕೆಂದು ಒಂದು ರೂಲನ್ನು ಬದಲಾವಣೆ ಮಾಡಿದ್ದೇವೆ. ಇದೂ ಅಲ್ಲದೆ ಮೊದಲು ಅಲ್ಲಿ ಕ್ಯಾಂಡಿಡೇಟ್ಸ್ ಎಷ್ಟು ಬೇಕೋ ಅದರ 4 ರಷ್ಟು ಅರ್ಜಿಗಳನ್ನು ಮಾತ್ರ ಅವರು ಇಂಟರ್‌ವ್ಯೂ ಸಮಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದಿತ್ತು. ಅದೇ ರೂಲನ್ನು ಮಾತ್ರ ಈಗಲೂ ಉಳಿಸಿಕೊಂಡಿದೆ. ಕ್ವಾಲಿಫೈಡ್ ಎಗ್ಜಾಮಿನೇಷನ್ಸ್ ಲೆಕ್ಕಕ್ಕೆ ತೆಗೆದುಕೊಂಡು ಇಂಟರ್‌ವ್ಯೂ ಮಾಡದೇ 30 ಮಾರ್ಕ್ಸ್ ಕೊಡಬೇಕೆಂದಿತ್ತು. ಎರಡನೆಯಸಾರಿ ಉಮೇದುವಾರರನ್ನು ಅರಿಸುವ ಕ್ರಮವಿತ್ತು. ಈಗ ಅದಕ್ಕೆ ಬದಲಾಗಿ ಕ್ವಾಲಿಫೈಡ್ ಎಗ್ಜಾಮಿನೇಷನ್ಸ್ ಆಗಿದ್ದರೆ ಅಂತಹವರಿಗೆ 30 ಅಂಕಗಳನ್ನು ಕೊಡುವುದಕ್ಕೆ ಬದಲಾಗಿ 100 ಅಂಕಗಳನ್ನು ಕೊಟ್ಟು ಅವರನ್ನೂ ಕೆಲವು ಸಂದರ್ಭಗಳಲ್ಲಿ ಅರಿಸಬೇಕೆಂದು ಈಗಾಗಲೇ ಅವರಿಗೆ ತಿಳಿಸಿದೆ.

SCHOLARSHIPS TO SCHEDULED CASTES AND SCHEDULED TRIBES STUDENTS OF BELGAUM DISTRICT

113. P. P. HEGRE :—(Chikodi)

Will the Minister for Community Development and Social Welfare be pleased to state :—

(*a*) the total number of Scheduled Castes 'and Scheduled Tribes' college students in Belgaum District

(SRI P. P. HEGRE)

who were sanctioned Government Scholarships during the year 1970-71, 1971-72 and 1972-73 and the Scholarship amount so sanctioned (annual figures and castewise numbers may kindly be provided);

(*b*) out of those students the number of students who were granted extra-boarding charges and the amounts of the same;

(*c*) the minimum and maximum amounts of scholarships and extra boarding charges granted for each student?

SRI M. MALLIKARJUNASWAMY :— (Minister for Community Development and Social Welfare)

(*a*) Amounts of Scholarships sanctioned to Scheduled Castes 'and Scheduled Tribes' students in Belgaum District during the last 3 years are given below :—

Year :	Amount
1970-71	Rs. 2,69,187-00
1971-72	Rs. 2,45,108-00
1972-73	Rs. 5,74,308-50

The number of Scholarships (Castewise) sanctioned during the last 3 years is also given below :—

Caste	Numbers		
	1970-71	1971-72	1972-73
(1) Holer	684	346	791
(2) Dhor	24	29	31
(3) Samagar	74	41	71
(4) Madar	83	43	122
(5) Adidravida	1	2	2
(6) C. Dasar	—	1	11
(7) Chalwadi	—	13	19
(8) Koracha	—	—	1

Caste	Numbers 1970-71	1971-72	1972-73
(9) Bhangi	—	1	8
(10) Raval	....	—	1
(11) Adikarnataka	—	1	3
(12) Lambani	—	—	1
(13) Moger	—	—	1
(14) Mag Garudi	—	—	1
Total	866	477	1,063

(*b*) The number of students in receipt of extra boarding charges and the total amounts sanctioned are given below :—

Year	No. of students	Amount sanctioned
1970-71	29	Rs. 5,292-00
1971-72	78	Rs. 18,456-00
1972-73	106	Rs. 20,880-00

(*c*) Monthly rates of Government of India Scholarships awarded to the students studying for different courses as day Scholars and hostellers and monthly rate of extra-boarding charges sanctioned by the State Government for awarding to the students staying in hostels attached to the educational institutions concerned are as under :—

	Day Scholar	Hosteller	Extra Boarding charges.
	Rs.	Rs.	Rs.
PUC., B.A., B.SC., and B Com :—	27-00	40-00	*100-00
M.A., M. Sc., M. Com., and LL. B.	35-00	50-00	do
Diploma in Civil, Mechanical and Electrical Engineering in			

(SRI M. MALLIKARJUNASWAMY)

Polytechnics	50-00	65-00	*100 00
Degree courses in Medicine and Engineering.	60-00	75-00	do

*This includes the amount of Scholarship sanctioned by the Government of India.

ಶ್ರೀ ಪಿ. ಪಿ. ಹೆಗಡೆ:- ನನ್ನ (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ 1970-71ನೇ ಮತ್ತು 1971-72ನೇ ಸಾಲಿಗೆ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ, 1970-71ನೇ ಸಾಲಿಗಿಂತ 1971-72ನೇ ಸಾಲಿನಲ್ಲಿ ವಿದ್ಯಾರ್ಥಿವೇತನಗಳ ಸಂಖ್ಯೆ ಕಡಿಮೆಯಾಗಿರುವುದು ವಿದ್ಯಾರ್ಥಿಗಳ ಸಂಖ್ಯೆಯೇ ಕಡಿಮೆಯಾಗಿರುವುದು ಕಾರಣವೋ ಅಥವಾ ಸರ್ಕಾರದಲ್ಲಿ ಅವರಿಗೆ ವಿದ್ಯಾರ್ಥಿವೇತನ ಕೊಡುವುದಕ್ಕೆ ಹಣ ಇರಲಿಲ್ಲವೆಂಬ ಕಾರಣವೋ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:- ಇದು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದುದೇ ಕಾರಣವೆಂದು ವೇದ್ಯವಾಗುತ್ತದೆ.

ಶ್ರೀ ಪಿ. ಪಿ. ಹೆಗಡೆ :- (ಅ) ಪ್ರಶ್ನೆಗೆ ಉತ್ತರವಾಗಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ನೋಡಿದ್ದೇ ಆದರೆ, ಹೆಚ್ಚಿನ ಭೋಜನ ವೆಚ್ಚವನ್ನು ಪಡೆದು ಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ 1970-71ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಬಹಳ ಕಡಿಮೆ ಎಂಬುದು ಸ್ಪಷ್ಟವಾಗಿ ತಮಗೆ ಮನವರಿಕೆ ಯಾಗಿದೆಯಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಅದು ಸ್ವಾಭಾವಿಕವಾಗಿ ಯಾರಿಗಾದರೂ ಆ ರೀತಿ ಮನವರಿಕೆಯಾಗುತ್ತದೆ.

ಶ್ರೀ ಪಿ. ಪಿ. ಹೆಗಡೆ :- ಕಳೆದ ಮೂರು ವರ್ಷಗಳಲ್ಲಿ ಮಂಜೂರ್ಮಾಡಲಾದ ವಿದ್ಯಾರ್ಥಿವೇತನಗಳ ಪ್ರಕಾರ ಪರ್ಸೆಂಟೇಜ್ ನೋಡಿದರೆ, ನಿಮ್ಮ ವರ್ಗದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಬಹಳವಾಗಿ ಅನ್ಯಾಯವಾಗಿದೆ. ಅದು ಅವರ ದೋಷವಲ್ಲ. ಹಿಂದೆ ವಿದ್ಯಾರ್ಥಿಗಳಿಗೆ ಹಾಸ್ಟೆಲುಗಳಲ್ಲದ್ದಾಗ ಎಕ್ಸ್‌ಟ್ರಾ ಬೋರ್ಡಿಂಗ್ ಚಾರ್ಜಸ್ ಎಂಬುದಾಗಿ 100 ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತಿದ್ದರು. ಅದ್ದರಿಂದ ಎಲ್ಲ ಹಾಸ್ಟೆಲ್ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನಗಳನ್ನು ಮೊದಲಿನಂತೆ ಕೊಡುವ ಹಾಗೆ ಈಗ ನಿರ್ಣಯಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದನ್ನು ನಮ್ಮ ಸರ್ಕಾರ ಮಾಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದ ಸ್ಕಾಲರ್‌ಶಿಪ್ ಕೇಂದ್ರ ಸರ್ಕಾರದವರು ಕೊಡತಕ್ಕವರು. ಎಕ್ಸ್‌ಟ್ರಾ ಬೋರ್ಡಿಂಗ್ ಚಾರ್ಜನ್ನು ರಾಜ್ಯಸರ್ಕಾರದವರು ಕೊಡುತ್ತಿದ್ದಾರೆ. ಇದರ ಬಗ್ಗೆ ಕೇಂದ್ರದ ಪ್ರಧಾನ ಮಂತ್ರಿಯವರು ಮತ್ತು ಹೋಂ ಮಿನಿಸ್ಟರ್ ಇದು ಬಹಳ ಹಿಂದೆ ನಿಗದಿ ಮಾಡಿರತಕ್ಕಂತಹ ಸ್ಕಾಲರ್‌ಶಿಪ್ಸ್, ಈಗ ಬೆಲೆಗಳು ಏರಿ ಜೀವನ ಮಟ್ಟ ಜಾಸ್ತಿಯಾಗಿರುವುದರಿಂದ ಅದನ್ನು ಏರಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಕೋಣಂಜೂರು ಲಿಂಗಪ್ಪ :—ಈ ಎಸ್. ಟಿ. ಮತ್ತು ಎಸ್. ಸಿ. ಹಾಸ್ಟೆಲುಗಳಲ್ಲಿ ಮುಗ್ಧ ವಿದ್ಯಾರ್ಥಿಗಳಿಂದ ರುಜು ಹಾಕಿಸಿಕೊಂಡು ಅಪಾರವಾದ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಇದಕ್ಕೆ ಏನು ಪರಿಹಾರವನ್ನು ಕಂಡು ಹಿಡಿದಿದ್ದೀರಿ?

ಶ್ರೀ. ಎಂ. ಮಲ್ಲಿಕಾರ್ಜುನಸ್ವಾಮಿ.— ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಪಿ. ಪಿ. ಹೆಗಡೆ.....ಈಗ ಕೊಡುತ್ತಿರುವ ಸ್ಕಾಲರ್‌ಶಿಪ್ ಕಡಿಮೆ ಎಂಬುದನ್ನು ತಾವು ಒಪ್ಪಿದ್ದೀರಿ. ಅದೇ ರೀತಿ ಎಕ್ಸ್‌ಟ್ರಾ ಬೋರ್ಡಿಂಗ್ ಚಾರ್ಜನ್ನು ರಾಜ್ಯ ಸರ್ಕಾರದವರು ಕೊಡುತ್ತಿದ್ದಾರೆ. ಆದರೆ ಅದನ್ನು ಹಾಸ್ಟೆಲಿನಲ್ಲಿರುವವರಿಗೆ ಮಾತ್ರ ಕೊಡುತ್ತಿದ್ದಾರೆ. ಡೇ ಸ್ಕೂಲರ್ಸ್‌ಗೆ ಕೊಡುತ್ತಾ ಇಲ್ಲ. ಅದ್ದರಿಂದ ಅದನ್ನು ಡೇ ಸ್ಕೂಲರ್ಸ್‌ಗೂ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. ಮಾನ್ಯ ಸದಸ್ಯರಿಗೆ ಸದನದ ಹೊರಗಡೆ ಸಹ ಎಷ್ಟೋ ಸಲ ಹೇಳಿದ್ದೇನೆ. ಹಾಸ್ಟೆಲುಗಳ ಸಂಖ್ಯೆ ಹೆಚ್ಚು ಮಾಡಿದರೆ ಕಾಲೇಜು ವಿದ್ಯಾರ್ಥಿಗಳಿಗೂ ಅಲ್ಲಿ ಅವಕಾಶ ಕೊಟ್ಟು ಅನುಕೂಲ ಕಲ್ಪಿಸುವುದಕ್ಕಾಗುತ್ತದೆ ಮತ್ತು ಅವರಿಗೆ ಎಕ್ಸ್‌ಟ್ರಾ ಬೋರ್ಡಿಂಗ್ ಚಾರ್ಜಸ್ ಕೊಡುವುದಕ್ಕೂ ಸಾಧ್ಯವಾಗುತ್ತದೆ. ಸರ್ಕಾರ ಇತ್ತೀಚೆಗೆ ಒಂದು ಪಾಲಿಸಿ ನಿರ್ಣಯ ತೆಗೆದುಕೊಂಡು ೬ ನೇ ಯೋಜನೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೂ ಹಾಸ್ಟೆಲ್ ಕಟ್ಟಡ ಕಟ್ಟಿಸಿಕೊಡಬೇಕೆಂದು ತೀರ್ಮಾನ ಮಾಡಿದೆ.

MISAPPROPRIATION OF FUNDS IN T.D.B , ARSIKERE

117. SRI H. S. SIDDAPPA :—(*Arasikere.*)

Will the Minister for Community Development and Social Welfare be pleased to state :—